ಸಿವಿಲ್ ನ್ಯಾಯಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಲಯ, ಬೇಲೂರು

ಕ್ರಿಮಿನಲ್ ಮಿಸ್. ನಂ. 594/2021

ಪಿ.ಡಬ್ಲೂ. 1

-ಸತ್ಯ ಪ್ರತಿಜ್ಞೆಯ ಮೇರೆಗೆ, ದಿನಾಂಕಃ 17-10-2025

**ಮುಂದುವರಿದ ಪಾಟೀ ಸವಾಲು: ಎದುರುದಾರರ ಪರ** ಶ್ರೀ ಎಸ್ ಆರ್ ಎಂ ವಕೀಲರಿಂದ

ನಾನು ಹೆರಿಗೆಗೆ ಎಂದು ತಾಯಿ ಮನೆಗೆ ಹೋಗಿ ಹೆರಿಗೆ ನಂತರ ಎದುರುದಾರರ ಮನೆಗೆ ಹೋಗದ ಕಾರಣ ಎದುರುದಾರರು ಬಂದು ನನ್ನನ್ನು ಕರೆದಿರುತ್ತಾರೆ ಎಂದರೆ ಸರಿಯಲ್ಲ. ನಂತರ 1ನೇ ಎದುರುದಾರರ ತಂದೆ ತಾಯಿ ಮತ್ತು ಸಂಬಂದಿಕರು ಈ ಬಗ್ಗೆ ಪಂಚಾಯಿತಿ ಮಾಡಿದ್ದು 1ನೇ ಎದುರುದಾರರ ಮನೆಗೆ ಹೋಗುತ್ತೇನೆ ಎಂದು ಒಪ್ಪಿಕೊಂಡು ನಂತರ ಅವರ ಮನೆಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು 1ನೇ ಎದುರುದಾರರ ನಡುವೆ ಹೊಂದಾಣಿಕೆ ಆಗದ ಕಾರಣ 1ನೇ ಎದುರುದಾರರು ವಿವಾಹ ವಿಚ್ಛೇಧನ ಕೋರಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪ್ರಕರಣ ಎಂ ಸಿ ನಂ. 94/2021 ಎಂದು ದಾಖಲಾಗಿದ್ದು ಅದರಲ್ಲಿ ನನಗೆ ನೋಟೀಸು ಬಂದಿದ್ದು ಸ್ವೀಕರಿಸಿರುತ್ತೇನೆ. ನೋಟೀಸು ಬಂದ ಸಂದರ್ಭದಲ್ಲಿ ಎದುರುದಾರರು ಅವರ ಮನೆಗೆ ನನ್ನನ್ನು ಕರೆದುಕೊಂಡು ಹೋಗಲು ಕೇಳಿದ್ದರು ಎಂದರೆ ಸರಿಯಲ್ಲ.

ಎಂ ಸಿ ಪ್ರಕರಣ ದಾಖಲಾದಾಗ ನನಗೆ ಎದುರುದಾರರ ಮನೆಗೆ ಹೋಗಲು ತೊಂದರೆ ಇರಲಿಲ್ಲ. ಸದರಿ ಪ್ರಕರಣ ತುಮಕೂರು ನ್ಯಾಯಾಲಯದಲ್ಲಿ ದಾಖಲಾದ ನಂತರ ನಾನು ಸದರಿ ಪ್ರಕರಣವನ್ನು ಬೇಲೂರು ನ್ಯಾಯಾಲಯಕ್ಕೆ ವರ್ಗಾವಣೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿ. ನನ್ನ ಮತ್ತು 1ನೇ ಎದುರುದಾರರ ವಿವಾಹ ಸರಳವಾಗಿ ಆಗಿರುತ್ತದೆ ಎಂದರೆ ಸರಿಯಲ್ಲ. 2 ಮತ್ತು 3ನೇ ಎದುರುದಾರರು ನನಗೆ ಅಜ್ಜಿ ಮತ್ತು ತಾತನಾಗಬೇಕು. ತುಮಕೂರಿನಲ್ಲಿ ವಿಚ್ಛೇದನ ಅರ್ಜಿ ಸಲ್ಲಿಸಿದ ನಂತರ ಉದ್ದೇಶ ಪೂರಕವಾಗಿ ಈ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರರು ಯಾವುದೇ ರೀತಿಯಲ್ಲಿ ವರದಕ್ಷಿಣೆ ಕಿರುಕುಳ ಕೊಟ್ಟಿಲ್ಲ, ಒಂದು ವೇಳೆ ಕೊಟ್ಟಿದ್ದರೆ ದೂರನ್ನು ದಾಖಲಿಸುತ್ತಿದ್ದೆ ಎಂದರೆ ಸರಿಯಲ್ಲ. ನಾನು ಸಾಂತ್ವನ ಕೇಂದ್ರಕ್ಕೆ ನೀಡಿದ ದೂರು ಎಂಸಿ ಪ್ರಕರಣ ದಾಖಲಾದ ನಂತರ ನೀಡಿದ ದೂರಾಗಿರುತ್ತದೆ ಎಂದರೆ ಸರಿಯಲ್ಲ. ಹೆರಿಗೆಗೆ ಬಂದ ನಂತರ ನಾನು ಪುನಃ ತುಮಕೂರಿನ ಎದುರುದಾರರ ಮನೆಗೆ ಹೋಗಿಲ್ಲ ಎಂದರೆ ಸಾಕ್ಷಿ ನಾನು ಬರುತ್ತೇನೆ ಎಂದರು ಸಹ ಎದುರುದಾರರು ಕರೆದುಕೊಂಡು ಹೋಗಿಲ್ಲ ಎಂದು ನುಡಿಯುತ್ತಾರೆ.

2020 ಮಾರ್ಚ್ ನಲ್ಲಿ ನಾನು ಹೆರಿಗೆಗೆ ಬಂದಿರುತ್ತೇನೆ. ನಂತರ ನಾನು 1ನೇ ಎದುರುದಾರರು ಮತ್ತು ನನ್ನ ಅಜ್ಜಿ ತಾತಾನ ಜೊತೆಗೆ ಮಾತನಾಡಲು ಪ್ರಯತ್ನಿಸಿಲ್ಲ ಎಂದರೆ ಸಾಕ್ಷಿ ನಾನು ಮಾತನಾಡಲು ಪ್ರಯತ್ನಿಸಿದರು ಸಹ ಅವರು ಮಾತನಾಡಿಸುತ್ತಿರಲಿಲ್ಲ ಎಂದು ನುಡಿಯುತ್ತಾರೆ. ನಾನು ಹೆರಿಗೆಗೆ ಬಂದಾಗ 1ನೇ ಎದುರುದಾರರು ನೋಡಲು ಬಂದಾಗ ಅವರ ಆದಾಯದ ಸಂಬಂದ ಹೀಯಾಳಿಸುತ್ತಿದ್ದರು ಎಂದರೆ ಸರಿಯಲ್ಲ. ಆಗ 1ನೇ ಎದುರುದಾರರು ಖಾಸಗಿ ಸಂಸ್ಥೆಯ ಕೆಲಸವನ್ನು ತ್ಯಜಿಸಿರುತ್ತಾರೆ ಎಂದರೆ ಸರಿಯಲ್ಲ. ಈಗ 1ನೇ ಎದುರುದಾರರು ಅವರ ತಂದೆ ತಾಯಿಯ ಮೇಲೆ ಅಲಂಭಿತರಾಗಿರುತ್ತಾರೆ ಎಂದರೆ ಸರಿಯಲ್ಲ. ನಾನು ಹೇಳುತ್ತಿರುವುದೆಲ್ಲಾ ಸುಳ್ಳು ಎಂದರೆ ಸರಿಯಲ್ಲ. ನನಗೆ ಎದುರುದಾರರು ಯಾವತ್ತು ಸಹ ಕಿರುಕುಳ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಅದಕ್ಕೆ ಸಂಬಂದಿಸಿದಂತೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

(ನಾಗೇಂದ್ರ)
ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು